Form No.4 (Civil)
Deposition
Sheets
(R.P.No.57)

## ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 2/2014

ಪ್ರಾ.ಸಾ. 11 ಚಾ.ಸಾ. 20

| | | |
|---|---|---|
| ಹೆಸರು | : | ಜಗದೀಶ ಹಂಚನಾಳ |
| ತಂದೆಯ ಹೆಸರು | : | ಚನ್ನಪ್ಪ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಸಿ ಪಿ ಐ |
| ವಾಸ | : | ಮುರುಡೇಶ್ವರ |

ವಿಸಿ ಮುಖಾಂತರ ಪ್ರಮಾಣ ವಚನ ಭೋಧಿಸಿದ ದಿನಾಂಕ: 07-03-2026

ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ಆಗಸ್ಟ 2011 ರಿಂದ ಸಪ್ಟೆಂಬರ 2013 ರವರೆಗೆ ನಾನು ಪಿಐ ಆಗಿ ಕರ್ನಾಟಕ ಲೋಕಾಯುಕ್ತ ಯಾದಗಿರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ಈ ಪ್ರಕರಣ ಕಡತವನ್ನು ಪಿ ಐ ಲಿಂಗಪ್ಪ ರವರಿಂದ ವಹಿಸಿಕೊಂಡು ದಾಖಲಾತಿಗಳನ್ನು ಪರಿಶೀಲಿಸಿ ತನಿಖೆ ಮುಂದುವರಿಸಿರುತ್ತೇನೆ. ದಿ: 26.11.2011 ರಂದು ನಾನು ಸಹಾಯಕ ಆಯುಕ್ ್ತರು ಯಾದಗಿರಿ ಉಪ ವಿಭಾಗ ರವರಿಗೆ ಪತ್ರ ಬರೆದು ದೂರು ದಾರರಿಗೆ ಸಂಭಂದಿಸಿದ ಹಸನಾಪೂರ ಗ್ರಾಮದ ಸರ್ವೆ ಸಂ: 46/1/2 ರಲ್ಲಿನ ಜಮೀನಿಗೆ ಸಂಬಂಧಿಸಿದ ಬಾಕಿ ಇದ್ದ ಕಡತದ ಬಗ್ಗೆ ಮಾಹಿತಿ ಕೊರಿರುತ್ತೆನೆ. ಸದರಿ ಪತ್ರಕ್ಕೆ ಪೂರಕವಾಗಿ ಮಾಹಿತಿಯನ್ನು ನಿಪಿ ರಂತೆ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೆನೆ.

3. ದಿ: 20-04-2012 ರಂದು ಈ ಪ್ರಕರಣದ ಇಬ್ಬರು ಆರೊಪಿತರನ್ನು ಕಛೇರಿಗೆ ಬರಮಾಡಿಕೊಂಡು ಲಿಖಿತ ಹೇಳಿಕೆಗಳನ್ನು ಪಡೆದು ಸಹಿ ಪಡೆದಿರುತ್ತೆನೆ. ಸಾಕ್ಷಿಗೆ ಕಡತದಲ್ಲಿನ ಸದರಿ ಹೇಳಿಕೆಗಳನ್ನು ತೋರಿಸಲಾಗಿ

ಅದರಲ್ಲಿರುವ ತಮ್ಮ ಮತ್ತು ಆರೋಪಿತರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.34 ಮತ್ತು 35 ಎಂದು ಸಹಿಗಳನ್ನು ನಿ.ಪಿ.34(ಎ)(ಬಿ) ಮತ್ತು 35(ಎ)(ಬಿ) ಎಂದು ಗುರುತಿಸಲಾಯಿತು.

4. ದಿಃ 15-06-2012 ರಂದು ಚಾಸಾಃ 15 ರವರ ಹೇಳಿಕೆಯನ್ನು ದೂರುದಾರರ ಕಡತ ಆರೋಪಿತರ ಬಳಿ ಬಾಕಿ ಇದ್ದ ಬಗ್ಗೆ ಪಡೆದಿರುತ್ತೇನೆ.

5. ದಿಃ 21-06-2012 ರಂದು ಈ ಪ್ರಕರಣದ 1 ನೇ ಆರೋಪಿತನಿಗೆ ಸಂಬಂದಿಸಿದ ಕರ್ತವ್ಯ ಹಂಚಿಕೆ ಬಗ್ಗೆ ಮಾಹಿತಿ ನೀಡುವಂತೆ ಚಾಸಾಃ 15 ರವರಿಗೆ ಪತ್ರ ಬರೆದಿರುತ್ತೇನೆ ಅದಕ್ಕೆ ಪೂರಕವಾಗಿ ಚಾಸಾಃ 15 ರವರು ಮಾಹಿತ ಒದಗಿಸಿರುತ್ತಾರೆ. ಸಾಕ್ಷಿಗೆ ಕಡತದಲ್ಲಿನ ಕರ್ತವ್ಯ ಹಂಚಿಕೆ ಮಾಹಿತಿ ಮತ್ತು ಮುಖ ಪತ್ರ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ಒಟ್ಟಾಗಿ ನಿ.ಪಿ.36 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.36(ಎ) ಎಂದು ಗುರುತಿಸಲಾಯಿತು.

6. ದಿಃ 15-11-2012 ರಂದು ಇಬ್ಬರು ಪಂಚರಾದ ಚಾಸಾಃ 4 ಮತ್ತು 5, 14 ಮತ್ತು 16 ರವರನ್ನು ಕರೆಯಿಸಿ ಅವರ ಸುವಕ್ಷಮ ವಾಯಿಸ ರೆಕಾರ್ಡರನಲ್ಲಿದ್ದ ದ್ವನಿ ಸಂಭಾಷಣೆಯನ್ನು ಕಂಪ್ಯೂಟರಗೆ ಅಳವಡಿಸಿ ಕೇಳಿಸಿ ಅದನ್ನು 3 ಸಿಡಿಗಳಿಗೆ ವರ್ಗಾಯಿಸಿ ನನ್ನ ಸಿಬ್ಬಂದಿಯ ಸಹಾಯದಿಂದ ಬಿಳಿಯ ಹಾಳೆಯ ಮೇಲೆ ಬರೆಸಿರುತ್ತೇನೆ. ಚಾಸಾಃ 14 ರವರು 1 ನೇ ಆರೋಪಿತ ದ್ವನಿಯನ್ನು ಮತ್ತು ಚಾಸಾಃ 16 ರವರು 2 ನೇ ಆರೋಪಿನ ದ್ವನಿಯನ್ನು ಗುರುತಿಸಿರುತ್ತಾರೆ. ಸಾಕ್ಷಿಗೆ ಕಡತದಲ್ಲಿನ ಸದರಿ ಪಂಚರನ್ನು ಕಳುಹಿಸಲು ಬರೆದ ಪತ್ರ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.37 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.37(ಎ) ಎಂದು ಗುರುತಿಸಲಾಯಿತು. ಆ ಬಗ್ಗೆ ನಿಪಿ 30 ರಂತೆ ಪಂಚನಮೆ ಮಾಡಿ ನಾನು ಸಹಿ ಮಾಡಿ ಪಂಚರ ಸಹಿ ಪಡೆದದಿರುತ್ತೇನೆ. ನಿಪಿ 30 ರ ಮೆಲಿನ ಸಾಕ್ಷಿಯ ಸಹಿಯನ್ನು ನಿಪಿ 30(ಇ) ಎಂದು ಗುರುತಿಸಲಾಯಿತು. ಸದರಿ ಸಿಡಿಗಳು ಈಗಾಗಲೆ ಮುಮಾ 1 ರಿಂದ 3 ಎಂದು ಗುರುತಿಸಲಾಗಿದೆ. ನಿಪಿ 27 ರಂತೆ ಸಂಭಾಷಣೆಯ ವಿವರವನುನ ಬರೆಸಿರುತ್ತೇನೆ. ನಿಪಿ 27 ರ ಮೆಲಿನ ಸಾಕ್ಷಿಯ ಸಹಿಯನ್ನು ನಿಪಿ 27(ಸಿ) ಎಂದು ಗುರುತಿಸಲಾಯಿತು.

7. ನಾನು ಈ ಪ್ರಕರಣದಲ್ಲಿ ಚಾಸಾಃ 4, 5, 12, 14, 15 ಮತ್ತು 16 ರವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

8. ನಂತರ ನನಗೆ ವರ್ಗಾವಣೆ ಆಗಿದ್ದು ಚಾಸಾಃ 21 ರವರಿಗೆ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ವಹಿಸಿಕೊಟ್ಟಿರುತ್ತೇನೆ. ಈ ಪ್ರಕರಣದ 2 ನೇ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಸಿ ಎಸ್ ಎಮ್ ವಕೀಲರಿಂದ ಃ</u>**

(ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಅನುಮತಿಸಿ ಮುಂದೂಡಲಾಯಿತು)

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಯಾದಗಿರಿ.